**<u>ಪಿಡಬ್ಲೂ-1</u>**

**<u>ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ. 13-11-2024</u>**

**ಪಾಟೀ ಸವಾಲುಃ ಶ್ರೀ ಎನ್ ಎಮ್  ಪ್ರತಿವಾದಿಯರ ಪರ ವಕೀಲರಿಂದ**

ವಾದಿಯ ತಂದೆಗೆ 4 ಜನ ಹೆಣ್ಣುಮಕ್ಕಳು ಮತ್ತು ಒಬ್ಬರು ಗಂಡುಮಗ ಇರುತ್ತಾರೆ. ದಾವಾ ಆಸ್ತಿಯನ್ನು ವಾದಿಯ ತಂದೆಯಾದ ಬಸಪ್ಪನವರು ಕ್ರಯದ ಮೂಲಕ ಖರೀದಿ ಮಾಡಿರುವ ಆಸ್ತಿಯಾಗಿರುತ್ತದೆ ಎಂದರೆ ಸಾಕ್ಷಿಯು ಅದು ಅವರ ಪಿತ್ರಾರ್ಜಿತ ಆಸ್ತಿ ಎಂದು ಹೇಳುತ್ತಾರೆ. ದಾವಾ ಆಸ್ತಿಯು ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನಿಪಿ-4 ರಲ್ಲಿ ದಾವಾ ಆಸ್ತಿಯ ವಿಸ್ತೀರ್ಣ  ಪೂರ್ವ

ಪಶ್ಚಿಮ 27 ಅಡಿ, ಉತ್ತರ ದಕ್ಷಿಣ 17 ಅಡಿ ಎಂದು ನಮೂದು ಇರುತ್ತದೆ ಎಂದರೆ ಸರಿ. ನಿಪಿ-4 ದಾವಾ ಆಸ್ತಿಯ ಮೂಲ ದಾಖಲೆ ಎಂದರೆ ಸರಿ. ನಿಪಿ-5 ರಲ್ಲಿ ಬಸಪ್ಪನವರ ಹೆಸರಿನ ಮುಂದೆ 27X17 ಅಡಿ ಎಂದು ನಮೂದು ಇರುತ್ತದೆ ಎಂದರೆ ಸರಿ. ನಿಪಿ-5 ರಲ್ಲಿ ಬಸಪ್ಪನವರ ಹೆಸರನ್ನು ಸುತ್ತು ಹಾಕಿ ನನ್ನ ಹೆಸರನ್ನು ನಮೂದು ಮಾಡಿದ್ದು, ನನ್ನ ಹೆಸರಿನ ಮುಂದೆ 16X40 ಅಡಿ ಎಂದು ನಮೂದು ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಬಸಪ್ಪನವರಹೆಸರಿನಲ್ಲಿರುವ ಆಸ್ತಿಯ ವಿಸ್ತೀರ್ಣ 27X17 ಅಡಿ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಅದರ ಒಟ್ಟು ವಿಸ್ತೀರ್ಣ 32X40 ಆಗಿರುತ್ತದೆ ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಯಾವುದೇ ದಾಖಲೆಗಳಲ್ಲಿ ವಿಸ್ತೀರ್ಣ 32X40 ನಮೂದು ಇರುವುದಿಲ್ಲ ಎಂದರೆ ಸಾಕ್ಷಿಯು ಸದರಿ ಆಸ್ತಿಯಲ್ಲಿ ನನ್ನ ತಾಯಿಗೆ ಮತ್ತು ನಮ್ಮ ಮಾವನಿಗೆ ಅರ್ದ ಅರ್ದ ಭಾಗ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಬಸಪ್ಪನವರು ನನ್ನ ತಾಯಿಗೆ ಮತ್ತು ನನ್ನ ಮಾವನಿಗೆ ಅರ್ದ ಅರ್ದ ಆಸ್ತಿ ಕೊಟ್ಟ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿರುತ್ತೇನೆ. ನಾನು ಆ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ನಾನು ನಮ್ಮ ವಕೀಲರ ಬಳಿ ನೀಡಿರುತ್ತೇನೆ. ನನ್ನ ಮಾವನ ಹೆಸರಿಗೆ ದಾವಾ ಆಸ್ತಿಯ ಪೈಕಿ  ವಿಸ್ತೀರ್ಣ 16X40 ಹೋಗಿರುತ್ತದೆ. ದಾವಾ ಶೆಡ್ಯೂಲ್ ನಲ್ಲಿ ದಾವಾ ಆಸ್ತಿಯಲ್ಲಿ ಮನೆ ಇದೆ ಎಂದು ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ವಾದಪತ್ರದ ಕಂಡಿಕೆಗಳಲ್ಲಿ ಎಲ್ಲಿಯೂ ಸಹ ಮನೆ ಇದೆ ಎಂದು ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ಈ ದಾವೆಯನ್ನು ಸಲ್ಲಿಸಿದ ನಂತರ ನ್ಯಾಯಾಲಯದಲ್ಲಿ ತಡೆಯಾಜ್ಞೆಯನ್ನು ಪಡೆದುಕೊಂಡು ಮನೆಯನ್ನು ಕಟ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-22 ರಿಂದ 37 ರ ಪ್ರಕಾರ ಹಾಜರುಪಡಿಸಿದ ವಿದ್ಯುತ್ ಬಿಲ್ ಗಳನ್ನು ಈ ದಾವೆಯನ್ನು ಸಲ್ಲಿಸಿದ ನಂತರದ ಬಿಲ್ ಗಳಾಗಿರುತ್ತವೆ ಎಂದರೆ ಸಾಕ್ಷಿಯು ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿರುವ ಬಿಲ್ ಗಳನ್ನು ಸಹ ನಮ್ಮ ವಕೀಲರಿಗೆ ನೀಡಿರುತ್ತೇವೆ ಎಂದು ನುಡಿಯುತ್ತಾರೆ. ಈಗ ಪ್ರಸ್ತುತ ದಾವಾ ಆಸ್ತಿಯಲ್ಲಿ ಶೀಟ್ ನ ಮನೆ ಇರುತ್ತದೆ. ನಾನು ಹಾಜರುಪಡಿಸಿದ ದಾಖಲೆಗಳಲ್ಲಿ ಎಲ್ಲಿಯೂ ಸಹ ಶೀಟ್ ನ ಮನೆ ಇರುತ್ತದೆ ಎಂದು ನಮೂದು ಇಲ್ಲ ಎಂದರೆ ಸರಿ. ನಾನು ನ್ಯಾಯಾಲಯದಲ್ಲಿ ನಮೂನೆ-9 ಮತ್ತು 10 ಅನ್ನು  ಹೊರತುಪಡಿಸಿ ನ್ಯಾಯಾಲಯಕ್ಕೆ ಕ್ರಯಪತ್ರ ಮತ್ತು ಇತರೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಬಸಪ್ಪನವರು ಕ್ರಯಕ್ಕೆ ಪಡೆದ ಕ್ರಯಪತ್ರವನ್ನು ಮುಚ್ಚಿಟ್ಟು ಹೆಚ್ಚು ವಿಸ್ತೀರ್ಣ ಕೋರಿ ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)
ಓ. ಹೇ. ಕೇ. ಸ. ಎ ಒಪ್ಪಲಾಗಿದೆ.

ಎರಡನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್ ಸಿ.,
ದೇವನಹಳ್ಳಿ.